65	ತುಂಗಾ ಏ.ನೀ.	1.00
66	ದಾವಣಗೆರೆಯ 19 ಕೆರೆಗಳು	10.00
67	ಉ.ಕನ್ನಡ ಜಿಲ್ಲೆಯ ಕಾಮಗಾರಿಗಳು	1.00
68	ಅಣೆಕಟ್ಟು ಕಾಲುವೆಗಳ ಆಧುನೀಕರಣ	9.00

13ನೇ ವಿಧಾನ ಸಭೆ 3ನೇ ಅಧಿವೇಶನ

170 ಶ್ರೀ. ಸಿದ್ದು ಸವದಿ (ತೇರದಾಳ್)

ಜಲ ಸಂಪನ್ಮೂಲ ಸಚಿವರು.

ಅ) ಕಂದಾಯ ಇಲಾಖೆಯಿಂದ 2009–10ನೇ ಸಾಲಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು

ಮಾಹಿತಿಯನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;

ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ದೊಡ್ಡ ಗ್ರಾಮಗಳನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೆ ಏರಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ;

ರಾಜ್ಯದ 247 ಗ್ರಾಮ ಪಂಚಾಯಿತಿಗಳನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೆ ಏರಿಸಲು ನಗರಾಭಿವೃದ್ಧಿ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ.

ಈ) ಕಂದಾಯ ಇಲಾಖೆಯಿಂದ ಹೊಸ ತಾಲ್ಲೂಕುಗಳನ್ನು ರಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ? ಹಾಗಿದ್ದಲ್ಲಿ, ಕೈಗೊಂಡ ಕ್ರಮಗಳ ಬಗ್ಗೆ ಮಾಹಿತಿ ನೀಡುವುದು;

ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಶ್ರೀ ಎಂ.ಬಿ.ಪ್ರಕಾಶ್ ರವರ ಅಧ್ಯಕ್ಷತೆಯಲ್ಲಿದ್ದ ತಾಲ್ಲೂಕು ಪುನರ್ ರಚನಾ ಸಮಿತಿಯು ಸರ್ಕಾರಕ್ಕೆ ವರದಿ ಸಲ್ಲಿಸಿದ್ದು, ಸಮಿತಿ ಮಾಡಿರುವ ಶಿಫಾರಸ್ಸುಗಳನ್ನು ಜಾರಿಗೊಳಿಸುವ ಬಗ್ಗೆ ಸರ್ಕಾರವು ನಿರ್ಣಯ ತೆಗೆದುಕೊಳ್ಳಬೇಕಿದೆ.

ಉ) ಕಂದಾಯ ಇಲಾಖೆಯಿಂದ ಹೊಸ ಸಬ್‌ರಿಜಿಸ್ಟ್ರಾರ್ ಕಛೇರಿ ತೆರೆಯಲು ಹಾಗೂ ತೇರದಾಳದಲ್ಲಿ ಹೊಸ ಸಬ್ ರಿಜಿಸ್ಟ್ರಾರ್ ಕಛೇರಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ?

ತೇರದಾಳ್‌ನಲ್ಲಿ ಹೊಸ ಉಪ ನೋಂದಣಿ ಕಛೇರಿಯನ್ನು ಪ್ರಾರಂಭಿಸುವ ಕುರಿತು ಜಿಲ್ಲಾ ನೋಂದಣಾಧಿಕಾರಿ ಬಾಗಲಕೋಟೆ ಇವರಿಂದ ಒಂದು ಸಮಗ್ರ ವರದಿಯನ್ನು ಕೇಳಿದ್ದು, ಇವರಿಂದ ವರದಿ ಬಂದ ನಂತರ ಎಲ್ಲಾ ಅಂಶಗಳನ್ನು

ಪರಿಶೀಲನೆ ಮಾಡಿ ಅಗತ್ಯವಿದ್ದಲ್ಲಿ ತೆರದಾಳ್‌ನಲ್ಲಿ ಉಪ ನೋಂದಣಿ ಕಛೇರಿ ಪ್ರಾರಂಭಿಸುವ ಬಗ್ಗೆ ಸೂಕ್ತ ತೀರ್ಮಾನವನ್ನು ತೆಗೆದುಕೊಳ್ಳಲಾಗುವುದು.

ಅನುಬಂದ–1

ಕಂದಾಯ ಇಲಾಖೆಯಿಂದ 2009–10ನೇ ಸಾಲಿಗೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳು

ಕ್ರಮ ಸಂಖ್ಯೆ	ಹಮ್ಮಿಕೊಂಡ ಕಾರ್ಯಕ್ರಮಗಳ ವಿವರ
1	50 ವರ್ಷಕ್ಕೂ ಮೇಲ್ಪಟ್ಟ ನಿರಾಶ್ರಿತ ಮಹಿಳೆಯರಿಗೆ ಆರ್ಥಿಕ ಮತ್ತು ಸಾಮಾಜಿಕ ಭದ್ರತೆ ಒದಗಿಸಲು ರೂ. 400 ಮಾಸಾಶನ ನೀಡುವುದು.
2	ಯಾದಗಿರಿ ಪಟ್ಟಣವನ್ನು ನೂತನ ಜಿಲ್ಲಾ ಕೇಂದ್ರವಾಗಿ ಅಭಿವೃದ್ಧಿಪಡಿಸಲು ವಿವಿಧ ಕಛೇರಿಗಳು ಮುಂತಾದ ಸೌಲಭ್ಯಗಳ ನಿರ್ಮಾಣ.
3	ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದ ಕಛೇರಿಗಳ ಸಂಕೀರ್ಣ ನಿರ್ಮಾಣ.
4	ಕಾಗಿನೆಲೆ ಕ್ಷೇತ್ರದ ಅಭಿವೃದ್ಧಿ ಕಾಮಗಾರಿಗಳು.
5	ರಾಜ್ಯದ ಎಲ್ಲಾ ಗ್ರಾಮ ನಕಾಶೆಗಳ ಗಣಕೀಕರಣ, ತದನಂತರ ಪ್ರತಿಯೊಂದು ಸರ್ವೆ ನಂಬರಿನ ಒಳಗಿನ ಹಿಸ್ಸಾ ನಂಬರುಗಳ ಡಿಜಿಟೈಸೇಷನ್.
6	ಗ್ರಾಮ ನಕಾಶೆಗಳ ಲ್ಯಾಮಿನೇಷನ್
7	ರಾಜ್ಯದಲ್ಲಿನ 174 ನಗರ / ಪಟ್ಟಣಗಳಲ್ಲಿ ನಗರ ಮಾಪನವನ್ನು ಜಾರಿಗೊಳಿಸುವುದು.
8	ರಾಜ್ಯದ 48 ನಗರ / ಪಟ್ಟಣಗಳಲ್ಲಿ ಲಭ್ಯವಿರುವ ನಗರಮಾಪನ ದಾಖಲೆಗಳನ್ನು ಗಣಕೀಕರಣಗೊಳಿಸುವುದು.
9	ಭೂ ಮಾಪನ ಮತ್ತು ಭೂದಾಖಲೆಗಳ ಇಲಾಖೆಯ ಕೇಂದ್ರ ಕಛೇರಿಯ ಆವರಣದಲ್ಲಿ (ಬೆಂಗಳೂರು) ಕೇಂದ್ರೀಕೃತ ಆಧುನಿಕ ಅಭಿಲೇಖಾಲಯ ಸ್ಥಾಪನೆ.
10	ಭೂ ಮಾಪನ ವಿಷಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸರ್ವೆ ಸರ್ವೀಸ್ ಕಾರ್ಪೋರೇಷನ್ ಸ್ಥಾಪಿಸಲು ಉದ್ದೇಶಿಸಲಾಗಿದೆ.
11	ಪಿಪಿಪಿ ಮಾದರಿ ಯೋಜನೆಯಡಿಯಲ್ಲಿ ಆಳವಡಿಸಿದ ಆಯ್ದ 5 ನಗರಗಳಲ್ಲಿ ನಗರಮಾಪನ ಕಾರ್ಯ ಕೈಗೊಳ್ಳಲು ಉದ್ದೇಶಿಸಲಾಗಿದೆ.
12	ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ: * ಕಾವೇರಿ ತಂತ್ರಾಂಶದ ಉನ್ನತೀಕರಣಗೊಳಿಸುವುದು.
13	• ಇ–ಸ್ಟಾಂಪಿಂಗ್ ಪದ್ಧತಿಯನ್ನು ಹಂತ ಹಂತವಾಗಿ ರಾಜ್ಯಾದ್ಯಂತ ಅನುಷ್ಠಾನಗೊಳಿಸುವುದು. • ಕಂಪ್ಯೂಟರ್ ಬಳಕೆ ಕುರಿತು ಇಲಾಖೆಯ ಎಲ್ಲಾ ಸಿಬ್ಬಂದಿಗೆ

14	ತರಬೇತಿ ನೀಡುವುದು.
15	• ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಕೇಂದ್ರ ಕಛೇರಿಯಲ್ಲಿ ಕಾಗದ–ವಿರಳ (Less Paper)ಆಡಳಿತ ಪದ್ಧತಿಯನ್ನು ಜಾರಿಗೊಳಿಸಲಾಗುವುದು.
16	• ಬೆಂಗಳೂರು ಜಿಲ್ಲೆಯಲ್ಲಿ ಕೆಲಸದ ಒತ್ತಡ ಮತ್ತು ಆದಾಯವನ್ನು ಆಧಾರವಾಗಿಟ್ಟುಕೊಂಡು ನೋಂದಣಿ ಕಛೇರಿಗಳನ್ನು ವಿಲೀನಗೊಳಿಸುವುದು.
17	ಇಲಾಖಾ ಸೇವೆಗಳನ್ನು ಸುಗಮಗೊಳಿಸಲು ಕರ್ನಾಟಕ ಮುದ್ರಾಂಕ ಕಾಯ್ದೆ 1957 ಮತ್ತು ಅದರಡಿಯ ನಿಯಮಾವಳಿಯನ್ನು ಸಮಗ್ರವಾಗಿ ತಿದ್ದುಪಡಿ ಮಾಡುವುದು.

ಕರ್ನಾಟಕ ವಿಧಾನ ಸಭೆ

182 ಶ್ರೀ ಎಂ.ಶ್ರೀನಿವಾಸ

ಅ) ಮಂಡ್ಯ ವಿ.ಸಿ. ನಾಲೆಯ ಎಲ್ಲಾ ಉಪನಾಲೆಗಳು ಹೂಳು ತುಂಬಿ ದುಸ್ಥಿತಿಯಲ್ಲಿದ್ದು, ರೈತರ ಗದ್ದೆಗಳಿಗೆ ನೀರು ಸರಬರಾಜಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ವಿ.ಸಿ. ನಾಲೆಯ ಉಪನಾಲೆಗಳ ಕೆಲವು ಭಾಗಗಳಲ್ಲಿ ಮಾತ್ರ ಹೂಳು ತುಂಬಿರುವುದು ಗಮನಕ್ಕೆ ಬಂದಿರುತ್ತದೆ. ಇದರಿಂದ ರೈತರುಗಳ ಜಮೀನುಗಳಿಗೆ ನೀರು ಹರಿಸುವಲ್ಲಿ ತೊಂದರೆಯಾಗಿರುವುದಿಲ್ಲ.

ಆ) ಹಾಗಿದ್ದಲ್ಲಿ, ಈ ನಾಲೆಗಳನ್ನು ದುರಸ್ಥಿಗೊಳಿಸಿ ಹೂಳು ತೆಗೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ (NREGA) ಅಡಿಯಲ್ಲಿ ನಾಲೆಗಳಲ್ಲಿ ಹೂಳು ಮತ್ತು ಗಿಡಗಂಟೆಗಳನ್ನು ತೆಗೆಯುವ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಿದ್ದು, ಕಾವೇರಿ ನೀರಾವರಿ ನಿಗಮದಿಂದ ಸದರಿ ನಾಲೆಗಳಲ್ಲಿ ಹೂಳೆತ್ತುವ ಮತ್ತು ಜಂಗಲ್ ತೆಗೆಯುವ ರೂ.392.77 ಲಕ್ಷಗಳ ಮೊತ್ತದ 515 ಕಾಮಗಾರಿಗಳಿಗೆ ಅಂದಾಜುಗಳನ್ನು ತಯಾರಿಸಿ, ತಾಂತ್ರಿಕ ಮಂಜೂರಾತಿ ನೀಡಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಂಬಂಧಪಟ್ಟ ಗ್ರಾಮ ಪಂಚಾಯ್ತಿಗಳಿಗೆ ಕಳುಹಿಸಲಾಗಿದೆ. ಪ್ರಸ್ತುತ ವರ್ಷ ಸದರಿ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಲಾಗುವುದು.

ಉಳಿದ ಕಾರ್ಯ ಕಾಮಗಾರಿಗಳನ್ನು ಇಲಾಖೆಯ ನಿರ್ವಹಣಾ ಕಾಮಗಾರಿಗಳ ಅಡಿಯಲ್ಲಿ 2009–10ನೇ ಸಾಲಿನಲ್ಲಿ ಕಾವೇರಿ ನೀರಾವರಿ ನಿಗಮಕ್ಕೆ ಒದಗಿಸಲಾದ ಅನುದಾನದ ಲಭ್ಯತೆಗನುಗುಣವಾಗಿ ಕೈಗೆತ್ತಿಕೊಳ್ಳಲು ಕ್ರಮ ಕೈಗೊಳ್ಳಲಾಗುವುದು.